# ನಗರಸಭಾ ಕಾರ್ಯಾಲಯ, ಮಂಡ್ಯ.

**ಸಂಖ್ಯೆ:ನಸಮಂ/ತಾಂತ್ರಿಕ ಶಾಖೆ/ವಿ.ನಿ/ಸಿ.ಆರ್/ 184/2007-08.** **ದಿನಾಂಕ:07-02-2008.**

**-: ಅಲ್ಪಾವಧಿ ಟೆಂಡರ್ ಪ್ರಕಟಣೆ :-**

ಈ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಮಂಡ್ಯ ನಗರಸಭೆಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರುಗಳಿಗೆ ತಿಳಿಯಪಡಿಸುವುದೇನೆಂದರೆ, ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು, ಮೂರನೇ ಮತ್ತು ಅದಕ್ಕಿಂತ ಮೇಲ್ಪಟ್ಟ ದರ್ಜೆ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಆಹ್ವಾನಿಸಲಾಗಿದ್ದು, ಇಷ್ಟವುಳ್ಳ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

1) ಟೆಂಡರ್ ಫಾರಂ ಕೋರಿ ಅರ್ಜಿ ಸಲಲಿಸಲು ಕೊನೆಯ ದಿನಾಂಕ 10/03/2008
2) ಖಾಲಿ ಟೆಂಡರ್ ಫಾರಂ ವಿತರಿಸಲು ಕೊನೆಯ ದಿನಾಂಕ 10/03/2008
3) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11/03/2008 **ರಂದು ಸಂಜೆ 4 ಗಂಟೆ.**
4) ಟೆಂಡರ್ ತೆರೆಯುವ ದಿನಾಂಕ 11/03/2008 ರಂದು ಸಾಯಂಕಾಲ 5.00 ಗಂಟೆಯ ನಂತರ
5) ಹೆಚ್ಚಿನ ಮಾಹಿಯನ್ನು ಕಛೇರಿಯ ಕೆಲಸದ ವೇಳೇಯಲ್ಲಿ ಮತ್ತು ನಗರಸಭೆ ವೆಬ್ ಸೈಟ್ www.mandyacity.gov.in ಪಡೆಯಬಹುದು.

| **ಕ್ರಮ ಸಂಖ್ಯೆ** | **ಕಾಮಗಾರಿಯ ವಿವರ** | **ಅಂದಾಜು ಮೊಬಲಗು ರೂ.ಲಕ್ಷಗಳಲ್ಲಿ** | ಇ.ಎಂ.ಡಿ. ರೂ.ಗಳಲ್ಲಿ | ಟೆಂಡರ್ ಫಾರಂ ಬೆಲೆ ರೂ.ಗಳಲ್ಲಿ | ಗುತ್ತಿಗೆದಾರರ ದರ್ಜೆ | ಅವಧಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ವಾರ್ಡ್ ನಂ. 25ರ ಉದಯಗಿರಿ ಸ್ಮಶಾನವನ್ನು ಅಭಿವೃದ್ಧಿ ಪಡಿಸುವುದು | 7.75 | 15,500/- | ರೂ. 800/- + ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 90 ದಿವಸಗಳು |
| 2 | ವಾರ್ಡ್ ನಂ. 25ರ ಬೋವಿ ಕಾಲೋನಿಯ ಎಡಭಾಗದಲ್ಲಿ ಆರ್.ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿ | 9.95 | 19,900/- | ರೂ. 1000/- + ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 90 ದಿವಸಗಳು |
| 3 | ವಾರ್ಡ್ ನಂ. 12ರಲ್ಲಿ ಗಾಂಧಿನಗರ ಪೌರಾಯುಕ್ತರ ವಸತಿ ಗೃಹದ ರಸ್ತೆಯ ಎಡಭಾಗದಲ್ಲಿ ಬಾಕ್ಸ್ ಚರಂಡಿ ನಿರ್ಮಾಣ | 3.55 | 8,875/- | ರೂ. 350/- | 3ನೇ ದರ್ಜೆ ಮತ್ತು ಮೇಲ್ಪಟ್ಟು | 90 ದಿವಸಗಳು |
| 4 | ವಾರ್ಡ್ ನಂ. 18ರ ಬುದ್ಧ ಮಾರ್ಗ ರಸ್ತೆಯಲ್ಲಿ ಮೆಟಲಿಂಗ್ ಮಾಡಿ ಡಾಂಬರೀಕರಣ ಮಾಡುವುದು ಮತ್ತು ಚರಂಡಿ ನಿರ್ಮಾಣ | 3.11 | 7,775/- | ರೂ. 350/- + ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 90 ದಿವಸಗಳು |
| 5 | ಹೊಸಹಳ್ಳಿ ಡಾ.ಬಿ.ಆರ್.ಅಂಬೇಡ್ಕರ್ ಭವನ ಮತ್ತು ಶಂಭುಲಿಂಗೇಶ್ವರ ದೇವಸ್ಥಾನ ದುರಸ್ತಿಗೊಳಿಸುವುದು (ಶೇಕಡ 18ರ ನಿಧಿ) | 1.50 | 1,625/- | ರೂ. 150/- + ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 90 ದಿವಸಗಳು |
| 6 | ವಿದ್ಯಾನಗರ ಡಾ.ಬಿ.ಆರ್.ಅಂಬೇಡ್ಕರ್ ಭವನ ದುರಸ್ತಿಗೊಳಿಸುವುದು (ಶೇಕಡ 18ರ ನಿಧಿ) | 0.65 | 1,300/- | ರೂ. 150/- + ತೆರಿಗೆ | 4ನೇ ದರ್ಜೆ ಮತ್ತು ಮೇಲ್ಪಟ್ಟು | 90 ದಿವಸಗಳು |

| 1 | 2 | 3 | 4 | 5 | 6 | 7 |
|---|---|---|---|---|---|---|
| 7 | ವಾರ್ಡ್ ನಂ.13ರ ಶಂಕರನಗರ ಅಂಬುಜಮ್ಮರವರ ಮನೆ ಮುಂಭಾಗದ ಉದ್ಯಾನವನಕ್ಕೆ ಫೆನ್ಸಿಂಗ್ ಹಾಕುವುದು | 3.60 | 9,000/- | ರೂ. 350/- + ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 90 ದಿವಸಗಳು |
| 8 | ವಾರ್ಡ್ ನಂ.9ರ ಗುಂಡುರಾವ್ ಉದ್ಯಾನವನಕ್ಕೆ ಫೆನ್ಸಿಂಗ್ ಹಾಕುವುದು | 4.95 | 12,500/- | ರೂ.500/- + ತೆರಿಗೆ | 3ನೇ ದರ್ಜೆ ಮತ್ತು ಮೇಲ್ಪಟ್ಟು | 90 ದಿವಸಗಳು |

**-: ಷ ರ ತ್ತು ಗ ಳು :-**

1) ಗುತ್ತಿಗೆದಾರರು ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಟೆಂಡರ್ ಫಾರಂ ಬೆಲೆಯ ರಸೀದಿಯೊಂದಿಗೆ ಮತ್ತು ಕಾಮಗಾರಿಗೆ ಸಂಬಂಧಿಸಿದಂತೆ ಇ.ಎಂ.ಡಿ ಹಣವನ್ನು ಡಿ.ಡಿ/ಬ್ಯಾಂಕರ್ ಚೆಕ್/ ಎಫ್.ಡಿ.ಆರ್ ಮೂಲಕ ಪೌರಾಯುಕ್ತರು, ನಗರಸಭೆ, ಮಂಡ್ಯರವರ ಹೆಸರಿಗೆ ಪಡೆದು ಕಛೇರಿ ಕೆಲಸದ ವೇಳೆಯಲ್ಲಿ (ಅಧಿಕೃತ ನೋಂದಣಿ ಪ್ರತಿಯೊಂದಿಗೆ) ಖಾಲಿ ಟೆಂಡರ್ ಫಾರಂ ಪಡೆಯಬಹುದಾಗಿದೆ.
2) ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.
3) ಸ್ವೀಕರಿಸಿದ ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನ ಕಛೇರಿ ಕೆಲಸದ ವೇಳೆಯಲ್ಲಿ ಹಾಜರಿರಬಹುದಾದ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.
4) ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಗುತ್ತಿಗೆದಾರರು ಅಂದಾಜು ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದ ಸಂದರ್ಭದಲ್ಲಿ ಕಡಿಮೆ ದರದ ವ್ಯತ್ಯಾಸದ ಮೊಬಲಗನ್ನು ಟೆಂಡರ್ ಜೊತೆಯಲ್ಲಿಯೇ ಗುತ್ತಿಗೆದಾರರು ಪೌರಾಯುಕ್ತರು, ನಗರಸಭೆ, ಮಂಡ್ಯರವರ ಹೆಸರಿಗೆ ಡಿ.ಡಿ.ರೂಪದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
5) ಕಾಮಗಾರಿಗಳ ಬಗ್ಗೆ ಸಂಪೂರ್ಣ ವಿವರಗಳನ್ನು ಕಛೇರಿ ಕೆಲಸದ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ಪಡೆಯಬಹುದಾಗಿದೆ.
6) ಆದಾಯ ತೆರಿಗೆ ಮತ್ತು ವಾಣಿಜ್ಯ ತೆರಿಗೆಗಳನ್ನು ಚಾಲ್ತಿ ಸಾಲಿನವರೆಗೆ ಪಾವತಿಸಿರುವ ಬಗ್ಗೆ ದೃಢೀಕರಣ ಪತ್ರ ಲಗತ್ತಿಸುವುದು.
7) ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಕಾರ್ಯಾದೇಶ ನೀಡಿದ ದಿನಂಕದಿಂದ 3 (ಮೂರು) ತಿಂಗಳು.
8) ಎಲ್ಲಾ ಕಾಮಗಾರಿಗಳು ಪೂರ್ಣಗೊಂಡ ದಿನಾಂಕದಿಂದ ಕನಿಷ್ಠ ಎರಡು ವರ್ಷಗಳ ಅವಧಿಗೆ ಗುತ್ತಿಗೆದಾರರುಗಳೇ ತಮ್ಮ ಸ್ವಂತ ಖರ್ಚಿನಲ್ಲಿ ನಿರ್ವಹಿಸಲು ಬದ್ಧರಾಗಿರತಕ್ಕದ್ದು.
9) ಮೇಲ್ಕಂಡ ಕಾಮಗಾರಿಗಳನ್ನು ನಗರಸಭಾ ನಿಧಿಯಿಂದ ನಿರ್ವಹಿಸುತ್ತಿರುವುದರಿಂದ, ಗುತ್ತಿಗೆದಾರರು ನಗರಸಭೆ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಬಿಲ್ ಪಡೆಯಲು ಬದ್ದರಾಗಿರತಕ್ಕದ್ದು.

**(ರಾಮಸ್ವಾಮಿ)**
**ಪೌರಾಯುಕ್ತರು,**
**ನಗರಸಭೆ, ಮಂಡ್ಯ**

**(ಎನ್.ಮಂಜುನಾಥ್ ಪ್ರಸಾದ್)**
**ಆಡಳಿತಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು,**
**ನಗರಸಭೆ, ಮಂಡ್ಯ ಮಂಡ್ಯ ಜಿಲ್ಲೆ, ಮಂಡ್ಯ**